# First Semester Three Year LL.B. Examination, January 2011
# FAMILY LAW – I : Hindu Law
# (Course – IV)

Duration : 3 Hours Max. Marks : 100

**Instructions** : 1. Answer all **5** Questions.
2. **One** essay type and **one** short note question or problem from **each unit** have to be attempted, which is referred as part (a) and (b) in all the units.
3. Figures to the right indicate marks.
4. Answers should be written **either** in English or Kannada **completely**.

## UNIT – I

Q. No. 1. (a) Write an explanatory note on two main schools of Hindu Law and state the distinctions between them. Marks : 15

ಹಿಂದೂ ಕಾನೂನಿನ ಎರಡು ಮುಖ್ಯ ಪಂಥಗಳ ಮೇಲೆ ವಿವರಣಾತ್ಮಕ ಟಿಪ್ಪಣಿ ಬರೆಯಿರಿ ಹಾಗೂ ಅವುಗಳ ನಡುವಣ ವ್ಯತ್ಯಾಸಗಳನ್ನು ತಿಳಿಸಿ.

OR/**ಅಥವಾ**

Who is Hindu ? Who are the persons governed by Hindu Law ?

ಹಿಂದೂ ಎಂದರೆ ಯಾರು ? ಹಿಂದೂ ಕಾನೂನು ಯಾರಿಗೆ ಅನ್ವಯಿಸುತ್ತದೆ ?

(b) State briefly the concept of “Dharma”. Marks : 5

‘‘ಧರ್ಮ’’ದ ಪರಿಕಲ್ಪನೆಯನ್ನು ಸಂಕ್ಷಿಪ್ತವಾಗಿ ತಿಳಿಸಿ.

OR/**ಅಥವಾ**

Write a note on “Manu Smriti”.

‘‘ಮನು ಸ್ಮೃತಿ’’ಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

## UNIT – II

Q. No. 2. (a) Elucidate the conditions for a valid marriage under the Hindu Marriage Act 1955. Marks : 15

ಹಿಂದೂ ವಿವಾಹ ಕಾನೂನು 1955 ಅನ್ವಯ ವಿಧಿಬದ್ಧ ವಿವಾಹಕ್ಕೆ ಇರುವ ಷರತ್ತುಗಳನ್ನು ವಿಶದೀಕರಿಸಿ.

OR/**ಅಥವಾ**

Describe the grounds available for judicial separation. Cite cases.

ನ್ಯಾಯಿಕ ಪ್ರತ್ಯೇಕೀಕರಣ ಪಡೆದುಕೊಳ್ಳಲು ಇರಬಹುದಾದ ಆಧಾರಗಳನ್ನು ವಿವರಿಸಿ. ಪ್ರಕರಣಗಳನ್ನು ಉಲ್ಲೇಖಿಸಿ.

(b) Ranganath married Rajani in the year 2005 and both of them lived together for some time. Then, in 2006, Ranganath sent Rajani to her parent's house, and starts living separately without giving reasonable cause. Now Rajani wants to obtain divorce. Advise her. Marks : 5

ರಂಗನಾಥನು, ರಜನಿಯನ್ನು 2005ರಲ್ಲಿ ವಿವಾಹವಾಗಿದ್ದು, ಕೆಲಕಾಲ ಅವರಿಬ್ಬರು ಒಟ್ಟಿಗೆ ಜೀವನ ನಡೆಸಿದರು. ಆ ನಂತರ 2006ನೇ ಇಸವಿಯಲ್ಲಿ ರಂಗನಾಥನು ರಜನಿಯನ್ನು ಆಕೆಯ ತಂದೆಯ ಮನೆಗೆ ಕಳುಹಿಸಿದನು ಮತ್ತು ಯಾವುದೇ ಕಾರಣವಿಲ್ಲದೆ ಅವನು ಪ್ರತ್ಯೇಕವಾಗಿ ವಾಸಿಸತೊಡಗಿದನು. ಈಗ ರಜನಿ ವಿವಾಹ ವಿಚ್ಛೇದನ ಪಡೆಯಲು ಇಚ್ಛಿಸಿದ್ದಾಳೆ. ಅವಳಿಗೆ ಸಲಹೆ ನೀಡಿರಿ.

OR/**ಅಥವಾ**

Write a note on "Maintenance pendentelite".

''ವ್ಯಾಜ್ಯಕಾಲೀನ ಜೀವನಾಂಶದ'' ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – III

Q. No. 3. (a) Who is a Coparcener ? Explain his rights and liabilities in a Mitakshara joint family. Marks : 15

ದಾಯಾದಿ ಎಂದರೆ ಯಾರು ? ಮಿತಾಕ್ಷರ ಅವಿಭಕ್ತ ಕುಟುಂಬದಲ್ಲಿ ಆತನ ಹಕ್ಕುಗಳು ಹಾಗೂ ಕರ್ತವ್ಯಗಳನ್ನು ವಿವರಿಸಿ.

OR/**ಅಥವಾ**

Define partition ? Explain the different modes of partition.

ವಿಭಜನೆ ವ್ಯಾಖ್ಯಾನಿಸಿರಿ. ವಿಭಜನೆಯ ವಿವಿಧ ವಿಧಾನಗಳನ್ನು ವಿವರಿಸಿ.

(b) State the essential features of valid endowment. Marks : 5

ವಿಧಿಬದ್ಧ ಧಾರ್ಮಿಕ ದತ್ತಿಯ ಅತ್ಯವಶ್ಯಕ ಅಂಶಗಳನ್ನು ತಿಳಿಸಿ.

OR/**ಅಥವಾ**

Define per stripes and percapita.

ಶಾಖಾವಾರು ಮತ್ತು ತಲಾವಾರುಗಳನ್ನು ವ್ಯಾಖ್ಯಾನಿಸಿರಿ.

## UNIT – IV

Q. No. 4. (a) Examine the general principles of successions of a male Hindu. Marks : 15

ಹಿಂದೂ ಉತ್ತರಾಧಿಕಾರ ರೀತ್ಯ ಹಿಂದೂ ಪುರುಷನ ಉತ್ತರಾಧಿಕಾರದ ಸಾಮಾನ್ಯ ತತ್ವಗಳನ್ನು ಪರೀಕ್ಷಿಸಿ.

OR/**ಅಥವಾ**

Elucidate the main features of Hindu Succession Act 1956.

ಹಿಂದೂ ಉತ್ತರಾಧಿಕಾರ ಅಧಿನಿಯಮ 1956ರ ಮುಖ್ಯ ಲಕ್ಷಣಗಳನ್ನು ವಿಶದೀಕರಿಸಿ.

(b) Explain Full blood, Half blood and uterine blood relationship. Marks : 5

ಪೂರ್ಣ ರಕ್ತ, ಅರ್ಧರಕ್ತ ಮತ್ತು ಏಕೋದರ ರಕ್ತ ಸಂಬಂಧಗಳನ್ನು ವಿವರಿಸಿ.

OR/**ಅಥವಾ**

Bhandariswamy died leaving behind his self acquired property and his wife, unmarried daughter, two sons, one sister and mother who got remarried just before his death. Distribute his property.

ಭಂಡಾರಿಸ್ವಾಮಿಯು ತನ್ನ ಹಿಂದೆ ಸ್ವಯಾರ್ಜಿತ ಆಸ್ತಿಯನ್ನಲ್ಲದೇ ತನ್ನ ಪತ್ನಿ, ಒಬ್ಬ ಅವಿವಾಹಿತ ಮಗಳು, ಇಬ್ಬರು ಗಂಡು ಮಕ್ಕಳು, ಒಬ್ಬಳು ತಂಗಿ ಮತ್ತು ಆತನ ಮರಣಕ್ಕೆ ಸ್ವಲ್ಪ ಮುಂಚೆ ಮರು ವಿವಾಹವಾಗಿರುವ ತಾಯಿ, ಇವರನ್ನೂ ಬಿಟ್ಟು ಮರಣಿಸಿದ್ದಾನೆ. ಆತನ ಆಸ್ತಿಯನ್ನು ಹಂಚಿರಿ.

## UNIT – V

Q. No. 5. (a) When a Hindu wife is entitled to maintenance and separate residence under Hindu Adoptions Maintenance Act 1956. Explain it by citing cases. Marks : 15

ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ 1956ರ ಅನ್ವಯ ಯಾವಾಗ ಹಿಂದೂ ಪತ್ನಿಯು ಜೀವನಾಂಶ ಹಾಗೂ ಪ್ರತ್ಯೇಕ ವಸತಿಗೆ ಅರ್ಹಳಾಗಿದ್ದಾಳೆ. ಪ್ರಕರಣಗಳೊಂದಿಗೆ ವಿವರಿಸಿ.

OR/**ಅಥವಾ**

Who is a testamentary Guardian ? Discuss his powers and obligations.

ಮರಣ ಶಾಸಿತ ಸಂರಕ್ಷಕನೆಂದರೆ ಯಾರು ? ಆತನ ಅಧಿಕಾರಗಳು ಮತ್ತು ಹೊಣೆಗಾರಿಕೆಗಳನ್ನು ಚರ್ಚಿಸಿ.

(b) State the essentials of a valid adoption. Marks : 5

ವಿಧಿಬದ್ಧ ದತ್ತಕದ ಅವಶ್ಯಕ ಅಂಶಗಳನ್ನು ತಿಳಿಸಿ.

OR/**ಅಥವಾ**

Mr. 'A' the testamentary guardian sold the property of a minor 'B', so as to meet the minor's educational expenses. On attaining of majority the minor challenges the sale. Decide.

'ಎ'ಯು ಮರಣ ಶಾಸನ ನಿಯುಕ್ತ ಸಂರಕ್ಷಕನಾಗಿದ್ದು 'ಬಿ' ಎಂಬ ಅಪ್ರಾಪ್ತ ವಯಸ್ಕನ ಆಸ್ತಿಯನ್ನು ಆತನ ವಿದ್ಯಾಭ್ಯಾಸದ ಕಾರಣಗಳಿಗಾಗಿ ಮಾರುತ್ತಾನೆ. 'ಬಿ'ಯು ಪ್ರಾಪ್ತ ವಯಸ್ಕನಾದಾಗ ಈ ಮಾರಾಟವನ್ನು ಪ್ರಶ್ನಿಸುತ್ತಾನೆ. ನಿರ್ಧರಿಸಿ.